# ಗೊಂಬೆಯಾಟದ ಕಾವ್ಯ ನೋಟ

ನಟನೆಯ ವ್ಯಾಖ್ಯಾನವನ್ನು ತನ್ನದೇ ಬಗೆಯಲ್ಲಿ ಮಂಡಿಸುವ ಈ ಕಿರುಚಿತ್ರ, ದೃಶ್ಯಸಂಯೋಜನೆಯ ರೀತಿಯಲ್ಲಿಯೇ ಗಮನಸೆಳೆಯುತ್ತದೆ.

■ ಗೌರಿ




ಪ್ರತಿ ಕಲಾವಿದ/ದೆ ನಟನೆ ಎನ್ನುವ ಪ್ರಕ್ರಿಯೆಯನ್ನು ತನ್ನದೇ ರೀತಿಯಲ್ಲಿ ವ್ಯಾಖ್ಯಾನಿಸಿಕೊಂಡಿರುತ್ತಾರೆ/ಳೆ. ಆ ವ್ಯಾಖ್ಯಾನ ಅವನ ಅನುಭವ, ಸುತ್ತಲಿನ ಜಗತ್ತಿನ ಪ್ರಭಾವ, ಅವನು ನಿರ್ವಹಿಸುವ ಪಾತ್ರಗಳ ಪ್ರಭಾವದಿಂದ ಬದಲಾಗುತ್ತಲೂ ಇರುತ್ತದೆ. ಅದು ಕಲಾವಿದನ ಬೆಳವಣಿಗೆಯ ಸೂಚನೆಯೂ ಹೌದು. ನಟನೆಯ ಕುರಿತಾದ ಅಂಥದ್ದೇ ಒಂದು ವ್ಯಾಖ್ಯಾನವನ್ನು ಕಿರುಚಿತ್ರವಾಗಿಸಿದ್ದಾರೆ ಅಭಿಷೇಕ್ ಕಾಸರಗೋಡು.

ಅಭಿಷೇಕ್ ಛಾಯಾಗ್ರಾಹಕರಾಗಿ ಕನ್ನಡ ಚಿತ್ರರಂಗದಲ್ಲಿ ಗಮನಸೆಳೆದವರು. ಹಾಗಾಗಿ ಅವರ ನಿರ್ದೇಶನದ ಕಿರುಚಿತ್ರದಲ್ಲಿಯೂ ವಿಶೇಷವಾಗಿ ಗಮನಸೆಳೆಯುವುದು ಛಾಯಾಗ್ರಹಣದ ನಡೆಗಳೇ. ಅವು ಎಷ್ಟು ಚುರುಕಾಗಿವೆ ಎಂದರೆ ಕೆಲವು ಸಲ ಕಥನದ ಕೈ ಬಿಟ್ಟು ಮುಂದಕ್ಕೆ ನಡೆದುಬಿಡುತ್ತವೆ!

ಒಂದು ಕಾಲ್ಪನಿಕ ಪಾತ್ರವನ್ನು ಒಪ್ಪಿಕೊಂಡ ನಟಿ ಅದನ್ನು ಹೇಗೆ ತನ್ನದಾಗಿಸಿಕೊಳ್ಳಬೇಕು? ತನ್ನ ಸ್ವಭಾವಕ್ಕೆ ಪೂರ್ತಿ ವಿರುದ್ಧವಾಗಿರುವ, ತನಗೆ ಗೊತ್ತೇ ಇಲ್ಲದ ಪ್ರಪಂಚದ ಭಾಗವಾಗಿರುವ ಪಾತ್ರಗಳಿಗೆ ಕ್ಯಾಮೆರಾ ಎದುರು ಜೀವ ತುಂಬುವುದು ಹೇಗೆ? ಇಂಥ ಪ್ರಶ್ನೆಯನ್ನು ಮುಂದಿಟ್ಟಾಗ ಬಹುತೇಕ ನಟ/ನಟಿಯರು ಕೊಡುವ ಉತ್ತರ, 'ನಾನು ಆ ಪಾತ್ರದಲ್ಲಿ ಪರಕಾಯ ಪ್ರವೇಶ ಮಾಡುತ್ತೇನೆ' ಆದರೆ ಪರಕಾಯ ಪ್ರವೇಶ ಎನ್ನುವುದು ನಟನೆಯಲ್ಲಿ ಒಂದು ಕ್ಷಣದಲ್ಲಿ ಸಿದ್ಧಿಸುವ ವರ ಅಲ್ಲ. ಅದು ನಮ್ಮೊಳಗಿನ ಅನುಭವವನ್ನೇ ಉದ್ದೀಪಿಸಿ ಅಭಿವ್ಯಕ್ತಿಸುವ ಪ್ರಕ್ರಿಯೆ. ಅಂಥ ಅಭಿವ್ಯಕ್ತಿಗೆ ಮೂಲ ಅನುಭವ. ಅನುಭವ ಎಂದರೆ ಪ್ರತ್ಯಕ್ಷವಾಗಿ ನಾವೇ ಅನುಭವಿಸಿದ್ದು ಎಂದು ಆಗಬೇಕಿಲ್ಲ. ನಾವು ಗಾಢವಾಗಿ ಆಲೋಚಿಸಿದ್ದು, ಕಂಡಿದ್ದು, ಒಳಗೊಂಡಿದ್ದು, ಓದಿದ್ದು ಎಲ್ಲವೂ ರಕ್ತಗತವಾದಾಗ ಅನುಭವವೇ ಆಗುತ್ತದೆ. ಅಂಥ ಅನುಭವದ ಬಹುಮುಖ್ಯ ಮೂಲ ಸುತ್ತಲಿನ ಜಗತ್ತು. ನಟನೊಬ್ಬ ತನ್ನ ಸುತ್ತಲಿನ ಜಗತ್ತಿನಲ್ಲಿ ಕಾಣುವ ವಿವಿಧ ವ್ಯಕ್ತಿಗಳನ್ನು ಸೂಕ್ಷ್ಮವಾಗಿ ಗಮನಿಸುತ್ತ ಇರುತ್ತಾನೆ. ಆಗಲೇ ಕಲ್ಪಿತ ಪಾತ್ರವೊಂದಕ್ಕೆ ಜೀವ ತುಂಬಲು ಸಾಧ್ಯವಾಗುತ್ತದೆ.

ಇಲ್ಲಿ ನಟಿಯೊಬ್ಬಳಿಗೆ ಒಂದು ಪಾತ್ರದಲ್ಲಿ ನಟಿಸುವ ಅವಕಾಶ ಬಂದಿದೆ. ಅದರ ಕುರಿತ ಮಾತುಕತೆಯ ಮೂಲಕವೇ ಈ ಕಿರುಚಿತ್ರ ಆರಂಭವಾಗುತ್ತದೆ. ಈ ದೃಶ್ಯದಲ್ಲಿ ನಿರ್ದೇಶಕರು



ಹೆಸರು: ಪಪೆಟ್ಸ್
ನಿರ್ಮಾಣ: ಸತ್ಯ ಹೆಗಡೆ
ನಿರ್ದೇಶನ: ಅಭಿಷೇಕ್ ಕಾಸರಗೋಡು
ಸಂಕಲನ: ಮನು ಶೆಡ್ಗಾರ್
ಛಾಯಾಗ್ರಹಣ: ನೂತನ್ ಎಸ್., ಗಜೇಂದ್ರ
ಸಂಗೀತ: ಮಿಥುನ್ ಮುಕುಂದನ್
ತಾರಾಗಣ: ಗೌತಮಿ ಜಾಧವ್, ಪವನ್ ಭಟ್, ಗಜೇಂದ್ರ

ಎರಡು ಪಾತ್ರಗಳನ್ನು ಪರಿಚಯಿಸುತ್ತಾರೆ. ಅದೂ ನೇರವಾಗಿ ಮುಖವನ್ನು ತೋರಿಸುವ ಬದಲಿಗೆ ಅವರ ವ್ಯಕ್ತಿತ್ವವನ್ನೂ, ಸಮಾಜದಲ್ಲಿ ಅವರ ಸ್ಥಾನವನ್ನೂ ಸೂಚಿಸುವ ಎಕ್ಸ್ಟ್ರೀಮ್ ಕ್ಲೋಸ್‌ಅಪ್ ಶಾಟ್‌ಗಳ ಮೂಲಕ.

ಮುಂದಿನ ದೃಶ್ಯದಲ್ಲಿಯೇ ಮನೆ ಮನೆ ಅಲೆದು ಸುಸ್ತಾದ ಒಬ್ಬಳು ಸೇಲ್ಸ್ ಗರ್ಲ್ ಕಾಣಿಸುತ್ತಾಳೆ. ಅವಳು ನಟಿಯ ಮನೆಗೆ ಬಂದು ಬಾಗಿಲು ತಟ್ಟುತ್ತಾಳೆ. ಮೊದಲು ಅಸಹನೆಯಿಂದ ಬಾಗಿಲು ಮುಚ್ಚುವ ನಟಿ ಕೊನೆಗೆ ಅವಳ ವಾಗ್ಝರಿಗೆ ಮರುಳಾಗಿ ಅವಳ ಮಾತುಗಳನ್ನು ಕೇಳಿಸಿಕೊಳ್ಳುತ್ತಾಳೆ. ಅವಳು ಮಾತಿನಲ್ಲಿಯೇ ಮರುಳುಮಾಡಿ ಒಂದಿಷ್ಟು ಪ್ರಾಡಕ್ಟ್‌ಗಳನ್ನು ಜನರಿಗೆ ಮಾರಾಟ ಮಾಡುವ ಸಾಮಾನ್ಯ ಸೇಲ್ಸ್ ಗರ್ಲ್. ಒಂದಿಷ್ಟು ಪುಸ್ತಕಗಳನ್ನು ಉಚಿತವಾಗಿ ಎಂದು ಹೇಳಿ ಕೊಟ್ಟು ಕೊನೆಗೆ ಸರ್ವೀಸ್ ಚಾರ್ಜ್ ಎಂದು ಎಲ್ಲ ಪುಸ್ತಕಗಳ ಹಣ ಪೀಕುವ ಸಿದ್ಧ ಸೂತ್ರ ಅವಳದ್ದು. ಅವಳ ಬಳಿ ಯಾವ ಪುಸ್ತಕವನ್ನೂ ಕೊಳ್ಳದಿದ್ದರೂ ನಟಿಗೆ ಅವಳಿಂದ ದೊಡ್ಡ ಸಹಾಯವಾಗುತ್ತದೆ. ಅವಳನ್ನೇ ಹೋಲುವ ಪಾತ್ರವೊಂದರಲ್ಲಿ ನಟಿಸುವ ಅವಕಾಶ ಪಡೆದಿರುವ ಅವಳು ಅವಳನ್ನೇ ಅನುಕರಿಸಿ ನಿರ್ದೇಶಕರ ಮೆಚ್ಚುಗೆ ಪಡೆಯುತ್ತಾಳೆ.

ಹಾಗೆ ನೋಡಿದರೆ ಇಲ್ಲಿ ಸ್ಪಷ್ಟರೂಪದ ಒಂದು ಕಥೆ ಇಲ್ಲ. ವ್ಯಾಖ್ಯಾನದ ಪ್ರಸ್ತುತಿಯಿದೆ. ಸಂಭಾಷಣೆಯಲ್ಲಿ ವಾಚ್ಯವೂ ಆಗಿ ಕೇಳಿಸುವ ಆ ವ್ಯಾಖ್ಯಾನ ದೃಶ್ಯನಿರೂಪಣೆಯಲ್ಲಿ ಕಾವ್ಯಾತ್ಮಕ ಗುಣವನ್ನು ಹೊಂದಿದೆ. ಈ ಕಾವ್ಯಗುಣ ಸಂಭಾಷಣೆಯಲ್ಲಿಯೂ, ಕಥೆಯ ಎಳೆಯಲ್ಲಿಯೂ ಸಾಧ್ಯವಾಗಿದ್ದರೆ ಇದೊಂದು ಒಳ್ಳೆಯ ಕಿರುಚಿತ್ರವಾಗುತ್ತಿತ್ತು.

ಕಿರುಚಿತ್ರ ವೀಕ್ಷಣೆಗೆ https://bit.ly/3K31ZOv ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.